



ಅರುಣ ಪಿ. ಭಟ್ಟ

# ವಾರಭವಿಷ್ಯ: 08.02.2024ರಿಂದ 14.02.2024ರವರೆಗೆ




ಉದ್ಯಮ ವ್ಯಾಪಾರ ನಡೆಸುತ್ತಿರುವವರಿಗೆ ಲಾಭವಿದೆ. ಹೊಸ ಉತ್ಸಾಹ ನಿಮ್ಮಲ್ಲಿ ಕಾಣಿಸಿಕೊಳ್ಳಲಿದೆ. ವಾರದ ಮಧ್ಯ ಭಾಗದಲ್ಲಿ ಜೀವನ ಮಟ್ಟದ ಸುಧಾರಣೆ ಬಗ್ಗೆ ಹೆಚ್ಚಿನ ಗಮನ ನೀಡಲಿದ್ದೀರಿ. ಆದರೆ ಈ ಅವಧಿಯಲ್ಲಿ ನಿಮಗೆ ನಾನಾ ಬಗೆಯ ಸವಾಲುಗಳು ಎದುರಾಗಲಿವೆ. ನಿಮ್ಮ ಸಂತೋಷದ ಕ್ಷಣಗಳಲ್ಲಿ ಅವು ಅಡೆತಡೆಗಳಂತೆ ಅನಿಸುತ್ತವೆ. ಶುಭದಿನ 10. ಹನುಮಾನ್ ಚಾಲೀಸ್ ಪಠಿಸಿರಿ.




ಉದ್ಯೋಗ ಮತ್ತು ಸಂಘಟನೆಗೆ ಸಂಬಂಧಿಸಿದಂತೆ ಉತ್ತಮವಾದ ಪ್ರಗತಿ ಇದೆ. ವೈಯಕ್ತಿಕ ಸಂಬಂಧದಲ್ಲಿ ಸಂಗಾತಿಗೆ ಉಡುಗೊರೆಗಳನ್ನು ನೀಡಲಿದ್ದೀರಿ. ನೀವು ನಂಬಿದ ವ್ಯಕ್ತಿಗಳು ವಿವಿಧ ವಿಚಾರಗಳಲ್ಲಿ ಸುಳ್ಳು ಹೇಳಿದ್ದಾರೆ ಎಂಬ ಸಂಗತಿ ನಿಮಗೆ ತಿಳಿದು ಬೇಸರವಾಗುತ್ತದೆ. ನಿಮ್ಮ ತಾಳ್ಮೆ ಮತ್ತು ಕೈಗೊಂಡ ಕೆಲಸಗಳ ಬಗ್ಗೆ ಉತ್ತಮ ಸ್ಪಂದನೆ ದೊರೆಯುತ್ತದೆ. ಶುಭದಿನ 11. ಗಣೇಶ ಪಂಚರತ್ನ ಪಠಿಸಿರಿ.




ವಾರದ ಆರಂಭದಲ್ಲಿ ಬೆಳವಣಿಗೆಗೆ ಅದ್ಭುತ ಅವಕಾಶಗಳಿವೆ. ನಿಮ್ಮ ಪರಿಶ್ರಮಕ್ಕೆ ತುಂಬ ವೇಗದಲ್ಲಿ ಪ್ರತಿಫಲ ದೊರೆಯಲಿದೆ. ಇನ್ನು ಹಣಕಾಸು ಪರಿಸ್ಥಿತಿ ಉತ್ತಮಪಡಿಸಿಕೊಳ್ಳುವ ಅವಕಾಶ ನಿಚ್ಚಳವಾಗಿ ಗೋಚರಿಸುತ್ತದೆ. ವಾರದ ಮಧ್ಯ ಭಾಗದಲ್ಲಿ ಬಹಳ ಕಾಲದಿಂದ ಕಾಣುತ್ತಿದ್ದ ಕನಸನ್ನು ಸಾಕಾರ ಮಾಡಿಕೊಳ್ಳಲು ಪ್ರಯತ್ನಿಸುತ್ತೀರಿ. ಖರ್ಚಿನ ಪ್ರಮಾಣ ಹೆಚ್ಚಿರುತ್ತದೆ. ಶುಭದಿನ 12. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ಉದ್ಯೋಗಸ್ಥರಿಗೆ ವಾರದ ಶುರುವಿನಲ್ಲಿ ಅನುಕೂಲವಿದೆ. ವ್ಯಾಪಾರ ವಲಯದಲ್ಲಿ ತೊಡಗಿರುವವರಿಗೆ ಉತ್ತಮ ಅನುಕೂಲವಿದೆ. ವೇತನ ಹೆಚ್ಚಳ ಆಗುವ ಸಾಧ್ಯತೆ ಇದೆ. ವೈಯಕ್ತಿಕ ಸಂಬಂಧದಲ್ಲಿ ಮನಸಿಗೆ ಬೇಸರವಾಗಲಿದೆ. ಇಂಥ ಸನ್ನಿವೇಶದಲ್ಲಿ ವಾಗ್ವಾದ ಮಾಡದೆ ವಾಸ್ತವವನ್ನು ವಿವರಿಸಿ. ಆರೋಗ್ಯಕ್ಕೆ ಸಂಬಂಧಿಸಿದಂತೆ ಅನುಕೂಲಕರ ಸಮಯ ಇದು. ಶುಭದಿನ 09. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಉದ್ಯೋಗ ಸ್ಥಳದಲ್ಲಿ ಪ್ರಗತಿಗಾಗಿ ಭಾರೀ ಶ್ರಮ ಹಾಕಲಿದ್ದೀರಿ. ಒಂದಲ್ಲ ಒಂದು ಕೆಲಸವನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸುವ ಒತ್ತಡ ಇದ್ದೇ ಇರುತ್ತದೆ. ನಿಮ್ಮ ಪರಿಶ್ರಮವನ್ನು ಮುಂದುವರಿಸಿದಲ್ಲಿ ಮಾತ್ರ ಭವಿಷ್ಯದಲ್ಲಿ ಅನುಕೂಲ ನಿರೀಕ್ಷಿಸಲು ಸಾಧ್ಯ. ಕೆಲವು ಕಾನೂನು ತೊಡಕುಗಳನ್ನು ಎದುರಿಸಬೇಕಾಗುತ್ತದೆ. ತಾಳ್ಮೆ ಮತ್ತು ಧೈರ್ಯ ಬಹಳ ಮುಖ್ಯ. ಶುಭದಿನ 11. ಕಾಲಭೈರವನ ಸೇವೆ ಮಾಡಿರಿ.




ನಿಮ್ಮ ಶ್ರಮಕ್ಕೆ ಅದ್ಭುತವಾದ ಅನುಕೂಲಗಳು ದೊರೆಯಲಿವೆ. ಪೋಷಕರ ಜೊತೆಗೆ ಹೆಚ್ಚು ಸಮಯ ಕಳೆಯಲು ಸಾಧ್ಯವಾಗದೆ ಕೆಲವು ಸಮಸ್ಯೆಗಳು ತಲೆದೋರಲಿವೆ. ವಾರದ ಮಧ್ಯ ಭಾಗದ ತನಕ ಆರೋಗ್ಯ ಉತ್ತಮವಾಗಿರುತ್ತದೆ. ಹೊಸ ಉದ್ಯೋಗಕ್ಕೆ ಪ್ರಯತ್ನಿಸುತ್ತಿರುವವರು ಹೆಚ್ಚಿನ ಶ್ರಮ ಹಾಕಬೇಕು. ವ್ಯವಹಾರದಲ್ಲಿ ಉತ್ತಮ ಲಾಭ ಇದೆ. ವಿದ್ಯಾರ್ಥಿಗಳಿಗೆ ಪ್ರಗತಿ ಇದೆ. ಶುಭದಿನ 12. ಸೌಂದರ್ಯ ಲಹರಿ ಪಠಿಸಿರಿ.




ಮನೆಗೆ ಅಗತ್ಯ ಇರುವ ವಸ್ತುಗಳನ್ನು ಖರೀದಿ ಮಾಡುವ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸುತ್ತೀರಿ. ನೀವು ಹಾಕಿದ ಶ್ರಮಕ್ಕೆ ಯಶಸ್ಸು ಸಿಗಲಿದೆ. ವೃತ್ತಿ ಜೀವನದಲ್ಲಿ ನಿರೀಕ್ಷಿತ ಯಶಸ್ಸು ದೊರೆಯಲಿದೆ. ಆ ಮೂಲಕ ನಿಮ್ಮ ಕನಸನ್ನು ಈಡೇರಿಸಿಕೊಳ್ಳಲಿದ್ದೀರಿ. ಇದೇ ಮೊದಲಿಗೆ ಎಂಬಂತೆ ಉದ್ಯೋಗಕ್ಕೆ ಪ್ರಯತ್ನಿಸುತ್ತಿರುವವರು ಹೆಚ್ಚಿನ ಪರಿಶ್ರಮ ಹಾಕಬೇಕಾಗುತ್ತದೆ. ಶುಭದಿನ 10. ಲಿಂಗಾಷ್ಟಕ ಪಠಿಸಿರಿ.




ಆದಾಯಕ್ಕಿಂತ ಖರ್ಚು ಹೆಚ್ಚಾಗುತ್ತಿದೆಯಲ್ಲಾ ಎಂಬ ಚಿಂತೆ ಕಾಡುತ್ತದೆ. ಇನ್ನು ಗೆಳೆಯ ಗೆಳತಿಯರ ಜತೆಗೆ ಒತ್ತಡದ ಸನ್ನಿವೇಶವನ್ನು ಎದುರಿಸುತ್ತೀರಿ. ಜೀರ್ಣಾಂಗಕ್ಕೆ ಸಂಬಂಧಿಸಿದ ಸಮಸ್ಯೆಗಳಿಂದ ಬಳಲುತ್ತಿರುವವರು ಸರಿಯಾದ ಚಿಕಿತ್ಸೆಯನ್ನು ಪಡೆಯುವುದು ಉತ್ತಮ. ವಾರದ ಮಧ್ಯ ಭಾಗಕ್ಕೆ ಬರುತ್ತಾ ಲಾಭದ ಪ್ರಮಾಣದಲ್ಲಿ ಸ್ವಲ್ಪ ಮಟ್ಟಿಗೆ ಏರಿಕೆಯಾಗುತ್ತದೆ. ಶುಭದಿನ 10. ಚಂಡಿ ಪಾರಾಯಣ ಮಾಡಿರಿ.




ಶೈಕ್ಷಣಿಕ ರಂಗದಲ್ಲಿ ಅದ್ಭುತವಾದ ಪ್ರಗತಿ ಇದೆ. ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ಯಶಸ್ಸು ನಿಮ್ಮದಾಗಲಿದೆ. ಸಂಗಾತಿ ಜೊತೆಗೆ ಬಾಂಧವ್ಯ ಇನ್ನಷ್ಟು ಗಟ್ಟಿಯಾಗಲಿದೆ. ಹಣಕಾಸು ವಿಚಾರದಲ್ಲಿ ನಿರೀಕ್ಷಿತವಾದ ಪ್ರಗತಿ ಆಗಲಿದೆ. ಕೆಲವರಿಗೆ ಖರ್ಚಿನಲ್ಲಿ ಅನಿರೀಕ್ಷಿತವಾದ ಹೆಚ್ಚಳ ಆಗಬಹುದು. ಹೀಗೆ ಆಗುವುದರಿಂದ ಸಮಸ್ಯೆಗಳು ಎದುರಾಗಲಿದೆ. ಲಾಭ ಗಳಿಸುವ ಅವಕಾಶ ಹೆಚ್ಚಲಿದೆ. ಶುಭದಿನ 11. ದತ್ತ ಗುರುಚರಿತ್ರೆ ಪಠಿಸಿರಿ.




ನಿಮಗೆ ಈಗಿರುವ ಗ್ರಹಗತಿಗಳನ್ನು ಗಮನಿಸಿದರೆ ಸಂಸ್ಥೆಯೊಂದರ ಜೊತೆಗೆ ದೀರ್ಘಾವಧಿ ಒಪ್ಪಂದಕ್ಕೆ ಬರುವ ಸಾಧ್ಯತೆಗಳಿವೆ. ವ್ಯಾಪಾರ ಉದ್ಯಮವನ್ನು ವಿಸ್ತರಿಸಲು ಅವಕಾಶಗಳು ದೊರೆಯಬಹುದು. ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ಉತ್ತಮವಾದ ಪ್ರಗತಿ ಇದೆ. ವೈಯಕ್ತಿಕ ಸಂಬಂಧದಲ್ಲಿ ಭಿನ್ನಾಭಿಪ್ರಾಯಗಳು ಇದ್ದಲ್ಲಿ ಅವುಗಳನ್ನು ನಿವಾರಿಸಿಕೊಳ್ಳಲು ಸೂಕ್ತ ಸಮಯ ಇದು. ಶುಭದಿನ 13. ನವಗ್ರಹ ಆರಾಧನೆ ಮಾಡಿರಿ.




ವಾರದ ಶುರುವಿನಲ್ಲಿ ವರ್ಚಸ್ಸು ವೃದ್ಧಿಯಾಗಲಿದೆ. ಆಯಾ ಉದ್ಯೋಗ ವೃತ್ತಿ ಕ್ಷೇತ್ರದಲ್ಲಿ ಉತ್ತಮ ಪ್ರಗತಿ ಇದೆ. ಅಸ್ತವ್ಯಸ್ತವಾಗಿ ನಿಂತುಹೋಗಿದ್ದ ಕೆಲಸ ಕಾರ್ಯಗಳನ್ನು ಕೈಗೆತ್ತಿಕೊಂಡು, ಗಡುವಿನೊಳಗೆ ಪೂರ್ಣಗೊಳಿಸಲಿದ್ದೀರಿ. ವಾರದ ಮಧ್ಯ ಭಾಗದ ಹೊತ್ತಿಗೆ ಜೀವನಶೈಲಿಯಲ್ಲಿ ಬದಲಾವಣೆ ಮಾಡಿಕೊಳ್ಳಲಿದ್ದೀರಿ. ಶುಭದಿನ 12. ವಿಷ್ಣು ಸಹಸ್ರನಾಮ ಮಾಡಿರಿ.




ವಾರದ ಶುರುವಿನಲ್ಲಿ ಭೂಮಿ ಖರೀದಿ ಮಾಡುವ ಸಾಧ್ಯತೆ ಇದೆ. ಉದ್ಯೋಗ ವಿಚಾರವಾಗಿ ದೂರ ಪ್ರಯಾಣ ಮಾಡಬೇಕಾಗುತ್ತದೆ. ಆರೋಗ್ಯದಲ್ಲಿ ಸಮಸ್ಯೆ ಎದುರಾಗಬಹುದು. ಈ ವಾರದಲ್ಲಿ ನಿರೀಕ್ಷಿತ ಮಟ್ಟದ ಪ್ರಗತಿ ಆಗುವುದಿಲ್ಲ. ಆದರೆ, ಬರಹ, ಸೈನ್ಯ ಹಾಗೂ ಭದ್ರತೆಗೆ ಸಂಬಂಧಿಸಿದ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಅತ್ಯುತ್ತಮವಾದ ಪ್ರಗತಿ ಇದೆ. ಶುಭದಿನ 09. ಶ್ರೀರಾಮರಕ್ಷಾ ಸ್ತೋತ್ರ ಪಠಿಸಿರಿ.